ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ
4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು– 560 041

ಸಂಖ್ಯೆ. ಆರ್‌ಜಿಯು/ಇಎಸ್‌ಟಿ/122/2022–23 ದಿನಾಂಕ: 23/11/2022

# ಸುತ್ತೋಲೆ

**ವಿಷಯ:** 2023ನೇ ಸಾಲಿನ ಸಾರ್ವತ್ರಿಕ ಮತ್ತು ಪರಿಮಿತ ರಜೆ ವಿವರಗಳ ಪಟ್ಟಿ.

**ಉಲ್ಲೇಖ:** ಸರ್ಕಾರದ ಅಧಿಸೂಚನೆ–1 ಸಂಖ್ಯೆ: ಸಿಆಸುಇ 16 ಹೆಚ್‌ಹೆಚ್‌ಎಲ್ 2022, ದಿನಾಂಕ: 21.11.2022.

* * *

ಸರ್ಕಾರದ ಉಲ್ಲೇಖಿತ ಅಧಿಸೂಚನೆಯನ್ವಯ, 2023ನೇ ಸಾಲಿಗೆ ಸಾರ್ವತ್ರಿಕ ಮತ್ತು ಪರಿಮಿತ ರಜಾ ದಿನಗಳ ಪಟ್ಟಿಯನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳ ಮಾಹಿತಿಗಾಗಿ ಕೆಳಕಂಡಂತೆ ಪ್ರಕಟಿಸಿದೆ : –

ಎಲ್ಲಾ ಎರಡನೇ ಶನಿವಾರ, ನಾಲ್ಕನೇ ಶನಿವಾರ ಮತ್ತು ಭಾನುವಾರಗಳು ಹಾಗೂ ಈ ಕೆಳಕಂಡ ದಿನಗಳು.

## ಅ) ಸಾರ್ವತ್ರಿಕ ರಜೆಗಳು :

| ಕ್ರಮ. ಸಂಖ್ಯೆ. | ದಿನಾಂಕ | ವಾರಗಳು | ಸಾರ್ವತ್ರಿಕ ರಜಾ ದಿನಗಳು |
|---|---|---|---|
| 1. | 26.01.2023 | ಗುರುವಾರ | ಗಣರಾಜ್ಯೋತ್ಸವ |
| 2. | 18.02.2023 | ಶನಿವಾರ | ಮಹಾ ಶಿವರಾತ್ರಿ |
| 3. | 22.03.2023 | ಬುಧವಾರ | ಯುಗಾದಿ ಹಬ್ಬ |
| 4. | 03.04.2023 | ಸೋಮವಾರ | ಮಹಾವೀರ ಜಯಂತಿ |
| 5. | 07.04.2023 | ಶುಕ್ರವಾರ | ಗುಡ್ ಫ್ರೈಡೆ |
| 6. | 14.04.2023 | ಶುಕ್ರವಾರ | ಡಾ|| ಬಿ.ಆರ್.ಅಂಬೇಡ್ಕರ್ ಜಯಂತಿ |
| 7. | 01.05.2023 | ಸೋಮವಾರ | ಕಾರ್ಮಿಕ ದಿನಾಚರಣೆ |
| 8. | 29.06.2023 | ಗುರುವಾರ | ಬಕ್ರೀದ್ |
| 9. | 29.07.2023 | ಶನಿವಾರ | ಮೊಹರಂ ಕಡೇ ದಿನ |
| 10. | 15.08.2023 | ಮಂಗಳವಾರ | ಸ್ವಾತಂತ್ರ್ಯ ದಿನಾಚರಣೆ |
| 11. | 18.09.2023 | ಸೋಮವಾರ | ವರಸಿದ್ಧಿ ವಿನಾಯಕ ವ್ರತ |
| 12. | 28.09.2023 | ಗುರುವಾರ | ಈದ್–ಮಿಲಾದ್ |

| ಕ್ರಮ. ಸಂಖ್ಯೆ. | ದಿನಾಂಕ | ವಾರಗಳು | ಸಾರ್ವತ್ರಿಕ ರಜಾ ದಿನಗಳು |
|---|---|---|---|
| 13. | 02.10.2023 | ಸೋಮವಾರ | ಗಾಂಧಿ ಜಯಂತಿ |
| 14. | 23.10.2023 | ಸೋಮವಾರ | ಮಹಾನವಮಿ, ಆಯುಧಪೂಜೆ |
| 15. | 24.10.2023 | ಮಂಗಳವಾರ | ವಿಜಯ ದಶಮಿ |
| 16. | 01.11.2023 | ಬುಧವಾರ | ಕನ್ನಡ ರಾಜ್ಯೋತ್ಸವ |
| 17. | 14.11.2023 | ಮಂಗಳವಾರ | ಬಲಿಪಾಡ್ಯಮಿ, ದೀಪಾವಳಿ |
| 18. | 30.11.2023 | ಗುರುವಾರ | ಕನಕದಾಸ ಜಯಂತಿ |
| 19. | 25.12.2023 | ಸೋಮವಾರ | ಕ್ರಿಸ್‌ಮಸ್ |

**ಸೂಚನೆ:–**

1) ಈ ರಜಾ ಪಟ್ಟಿಯಲ್ಲಿ ಭಾನುವಾರಗಳಂದು ಬರುವ ಉತ್ತರಾಯಣ ಪುಣ್ಯಕಾಲ, ಮಕರ ಸಂಕ್ರಾಂತಿ (15.01.2023), ಬಸವ ಜಯಂತಿ/ಅಕ್ಷಯ ತೃತೀಯ (23.04.2023) ಮತ್ತು ನರಕ ಚತುರ್ದಶಿ (12.11.2023) ಹಾಗೂ ಎರಡನೇ ಶನಿವಾರದಂದು ಬರುವ ಮಹಾಲಯ ಅಮಾವಾಸ್ಯೆ (14.10.2023) ಹಾಗೂ ನಾಲ್ಕನೇ ಶನಿವಾರದಂದು ಬರುವ ಖುತುಬ್–ಎ–ರಂಜಾನ್ (22.04.2023) ಮತ್ತು ಮಹರ್ಷಿ ವಾಲ್ಮೀಕಿ ಜಯಂತಿ (28.10.2023) ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

2) ಸಾರ್ವತ್ರಿಕ ರಜಾ ದಿನಗಳಲ್ಲಿ ರಾಜ್ಯಾದ್ಯಂತ ಸರ್ಕಾರಿ ಕಛೇರಿಗಳು ಮುಚ್ಚಲ್ಪಡುತ್ತವೆ. ಕಛೇರಿಯ ಜರೂರು ಕೆಲಸವನ್ನು ವಿಲೇವಾರಿ ಮಾಡುವ ಬಗ್ಗೆ ಇಲಾಖಾ ಮುಖ್ಯಸ್ಥರುಗಳು ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.

3) ಈ ಪಟ್ಟಿಯಲ್ಲಿ ಸೇರಿಸಲಾಗಿರುವ ಮುಸಲ್ಮಾನ ಬಾಂಧವರ ಹಬ್ಬಗಳು ನಿಗಧಿತ ದಿನಾಂಕದಂದು ಬೀಳದಿದ್ದರೆ ಸರ್ಕಾರಿ ಸೇವೆಯಲ್ಲಿರುವ ಮುಸಲ್ಮಾನ ಬಾಂಧವರಿಗೆ ನಿಗಧಿತ ರಜೆಗೆ ಬದಲಾಗಿ ಹಬ್ಬದ ದಿವಸ ರಜಾ ಮಂಜೂರು ಮಾಡಬಹುದು.

4) ದಿನಾಂಕ: 03.09.2023 (ಭಾನುವಾರ) ಕೈಲ್ ಮೂಹೂರ್ತ, ದಿನಾಂಕ: 18.10.2023 (ಬುಧವಾರ) ತುಲಾ ಸಂಕ್ರಮಣ ಹಾಗೂ ದಿನಾಂಕ: 28.11.2023 (ಮಂಗಳವಾರ) ಹುತ್ತರಿ ಹಬ್ಬವನ್ನು ಆಚರಿಸಲು ಕೊಡಗು ಜಿಲ್ಲೆಗೆ ಮಾತ್ರ ಅನ್ವಯವಾಗುವಂತೆ ಸ್ಥಳೀಯ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ.

5) ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಪ್ರತ್ಯೇಕ ರಜಾ ದಿನಗಳ ಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಪ್ರಕಟಿಸುವರು.

6) ಸಾರ್ವತ್ರಿಕ ರಜಾ ದಿನಗಳ ಜೊತೆಗೆ ರಾಜ್ಯ ಸರ್ಕಾರಿ ನೌಕರರು ಎರಡು ದಿವಸಗಳಿಗೆ ಮೀರದಂತೆ 2023ನೇ ವರ್ಷದಲ್ಲಿ ಅಧಿಸೂಚನೆ–1ರ ಅನುಬಂಧದಲ್ಲಿ ತಿಳಿಸಿರುವ ಪರಿಮಿತ ರಜೆಯನ್ನು ಪೂರ್ವಾನುಮತಿ ಪಡೆದು ಉಪಯೋಗಿಸಿಕೊಳ್ಳಬಹುದು. ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲು ಅಧಿಕಾರವುಳ್ಳ ಅಧಿಕಾರಿಗಳು ಪ್ರಸ್ತುತ ಅನುಮತಿಗೆ ಮಂಜೂರಾತಿ ನೀಡತಕ್ಕದ್ದು.

## ಆ) ಪರಿಮಿತ ರಜೆಗಳು :

| ಕ್ರಮ. ಸಂಖ್ಯೆ. | ದಿನಾಂಕ | ವಾರಗಳು | ಪರಿಮಿತ ರಜಾ ದಿನಗಳು |
|---|---|---|---|
| 1. | 30.01.2023 | ಸೋಮವಾರ | ಮಧ್ವ ನವಮಿ |
| 2. | 07.03.2023 | ಮಂಗಳವಾರ | ಷಬ್-ಎ-ಬರಾತ್ |
| 3. | 08.03.2023 | ಬುಧವಾರ | ಹೋಳಿ ಹಬ್ಬ |
| 4. | 30.03.2023 | ಗುರುವಾರ | ಶ್ರೀ ರಾಮನವಮಿ |
| 5. | 18.04.2023 | ಮಂಗಳವಾರ | ಷಬ್-ಎ-ಖಾದರ್ |
| 6. | 21.04.2023 | ಶುಕ್ರವಾರ | ಜುಮತ್-ಉಲ್-ವಿದಾ |
| 7. | 25.04.2023 | ಮಂಗಳವಾರ | ಶ್ರೀ ಶಂಕರಾಚಾರ್ಯ ಜಯಂತಿ, ಶ್ರೀ ರಾಮಾನುಜಾಚಾರ್ಯ ಜಯಂತಿ |
| 8. | 05.05.2023 | ಶುಕ್ರವಾರ | ಬುದ್ಧ ಪೂರ್ಣಿಮ |
| 9. | 25.08.2023 | ಶುಕ್ರವಾರ | ಶ್ರೀ ವರಮಹಾಲಕ್ಷ್ಮಿ ವ್ರತ |
| 10. | 29.08.2023 | ಮಂಗಳವಾರ | ಋಗ್ ಉಪಕರ್ಮ, ತಿರು ಓಣಂ |
| 11. | 30.08.2023 | ಬುಧವಾರ | ಯಜುರ್ ಉಪಕರ್ಮ |
| 12. | 31.08.2023 | ಗುರುವಾರ | ಬ್ರಹ್ಮಶ್ರೀ ನಾರಾಯಣಗುರು ಜಯಂತಿ |
| 13. | 06.09.2023 | ಬುಧವಾರ | ಶ್ರೀ ಕೃಷ್ಣ ಜನ್ಮಾಷ್ಟಮಿ |
| 14. | 08.09.2023 | ಶುಕ್ರವಾರ | ಕನ್ಯಾ ಮರಿಯಮ್ಮ ಜಯಂತಿ |
| 15. | 18.10.2023 | ಬುಧವಾರ | ತುಲಾ ಸಂಕ್ರಮಣ |
| 16. | 27.11.2023 | ಸೋಮವಾರ | ಗುರು ನಾನಕ್ ಜಯಂತಿ |
| 17. | 28.11.2023 | ಮಂಗಳವಾರ | ಹುತ್ತರಿ ಹಬ್ಬ |

**ಸೂಚನೆ:-**

1) ನೂತನ ವರ್ಷಾರಂಭ (01.01.2023), ದೇವರ ದಾಸಿಮಯ್ಯ ಜಯಂತಿ (26.03.2023), ವಿಶ್ವ ಕರ್ಮ ಜಯಂತಿ (17.09.2023) ಮತ್ತು ಕ್ರಿಸ್‌ಮಸ್ ಈವ್ (24.12.2023) ಭಾನುವಾರದಂದು ಹಾಗೂ ಹೋಲಿ ಸ್ಯಾಟರ್ ಡೇ (08.04.2023) ಎರಡನೇ ಶನಿವಾರದಂದು ಬರುವುದರಿಂದ ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

2) ಸೌರಮಾನ ಯುಗಾದಿ (14.04.2023) ಶುಕ್ರವಾರ ಡಾ|| ಬಿ.ಆರ್.ಅಂಬೇಡ್ಕರ್ ಜಯಂತಿ, ಸ್ವರ್ಣಗೌರಿ ವ್ರತ (18.09.2023) ಸೋಮವಾರ ವರಸಿದ್ಧಿ ವಿನಾಯಕ ವ್ರತ ಹಾಗೂ ಅನಂತ ಪದ್ಮನಾಭ ವ್ರತ (28.09.2023) ಗುರುವಾರ ಈದ್-ಮಿಲಾದ್ ನಿಮಿತ್ತ ಘೋಷಿಸಿರುವ ಸಾರ್ವತ್ರಿಕ ರಜಾ ದಿನಗಳಂದು ಬರುವುದರಿಂದ ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ.

ವಿಶ್ವವಿದ್ಯಾಲಯವು ಪ್ರತಿ ತಿಂಗಳಲ್ಲಿ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರವನ್ನು ಹೊರತುಪಡಿಸಿ, ಉಳಿದ ಎಲ್ಲಾ ಶನಿವಾರಗಳಂದು ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ ಕಾರ್ಯವನ್ನು ನಿರ್ವಹಿಸುತ್ತದೆ.

*[**ಸೂಚನೆ:** ಸರ್ಕಾರವು ಮೇಲೆ ಸೂಚಿಸಿರುವ ಸಾರ್ವತ್ರಿಕ ರಜಾ ದಿನ ಅಥವಾ ಪರಿಮಿತ ರಜಾ ದಿನಗಳನ್ನು ಬದಲಾಯಿಸಿ ಆದೇಶ ಹೊರಡಿಸಿದಲ್ಲಿ ಅದರಂತೆ ಸೂಕ್ತ ಬದಲಾವಣೆ ಮಾಡಿಕೊಳ್ಳತಕ್ಕದ್ದು]*

**ಕುಲಸಚಿವರು**

**ಇವರಿಗೆ,**

ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿಗಾಗಿ

**ಪ್ರತಿಗಳು : –**

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು–560 001.
3. ಮಾನ್ಯ ಕುಲಪತಿಗಳು / ಕುಲಸಚಿವರು / ಕುಲಸಚಿವರು (ಮೌಲ್ಯಮಾಪನ) / ಹಣಕಾಸು ಅಧಿಕಾರಿಗಳ ಆಪ್ತಸಹಾಯಕರಿಗೆ, ರಾ.ಗಾ.ಆ.ವಿ.ವಿ, ಬೆಂಗಳೂರು.
4. ಸಿಸ್ಟಮ್ ಅನಾಲಿಸ್ಟ್, ರಾ.ಗಾ.ಆ.ವಿ.ವಿ, ಬೆಂಗಳೂರು– ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
5. ವಿಶ್ವವಿದ್ಯಾಲಯದ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ.
6. ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಗಳು / ನೌಕರರುಗಳ ವರ್ಗದವರಿಗೆ.
7. ಸೂಚನಾ ಫಲಕ.
8. ಕಛೇರಿ ಪ್ರತಿ.